ವಿಚಾರವೂ ಹೌದು. ಈ ಹಿನ್ನೆಲೆಯಲ್ಲಿ ಖೊಮೇನಿಯ ಫತ್ವಾದ ನಂತರ ರಶ್ದಿ ತಮ್ಮ ಸುರಕ್ಷತೆಗಾಗಿ ಛದ್ಮವೇಷದಲ್ಲಿರಬೇಕಾದ ಕಾಲದ ಅನುಭವ ಕಥನವನ್ನು 'ಜೋಸೆಫ್ ಆಂಟನ್' ಎನ್ನುವ ಪುಸ್ತಕದಲ್ಲಿ ದಾಖಲಿಸಿದ್ದಾರೆ. ಅದು ಅವರದೇ ಅನುಭವವಾದರೂ ರಶ್ದಿ ಅದನ್ನು ಬರೆಯಲು ಉಪಯೋಗಿಸಿದ ಶೈಲಿ ಹೊರಗಿನಿಂದ-ಬೆರಗಿನಿಂದ ನೋಡುತ್ತಿರುವ ಬರಹಗಾರನದೇ ಹೊರತು, ಅನುಭವಿಸುತ್ತಿರುವ ಆತ್ಮಕಥನವಲ್ಲ. ಅನುಭವಗಳನ್ನು ನಿಜವನ್ನೂ ಗ್ರಹಿಸಲು ಉಪಯೋಗಿಸಬೇಗಾದ ದೂರ ಮತ್ತು ವಸ್ತುನಿಷ್ಠತೆಗೆ ಈ ಶೈಲಿ ಒಗ್ಗಿದ್ದೇನೋ...

ಗಾರ್ಸಿಯಾ ಮಾರ್ಕೇಸ್ ಬಗ್ಗೆ ಬರೆಯುತ್ತಾ ತಮ್ಮನ್ನು ತಾವೇ ಕಳೆದುಕೊಳ್ಳದ ಲೇಖಕರಿಲ್ಲ. ಆದರೆ ಒಬ್ಬ ಮಹಾನ್ ಲೇಖಕ ಸಾಮಾನ್ಯ ಮನುಷ್ಯನಾಗುವುದು ಹೇಗೆ? ಡೇನಿಯಲ್ ಅಲಾರ್ಕಾನ್ ಬಿಬಿಸಿಗೆ ಒಮ್ಮೆ ಈ ಮಾತು ಹೇಳಿದರಂತೆ: "ಕೆಲ ವರ್ಷಗಳ ಹಿಂದೆ ನಾನು ಕಾರ್ತಗೆನಾದಲ್ಲಿದ್ದೆ. ನನ್ನನ್ನು ಒಯ್ಯುತ್ತಿದ್ದ ಟ್ಯಾಕ್ಸಿ ಚಾಲಕ – 'ಅದು ಗ್ಯಾಬೋನ (ಗಾರ್ಸಿಯಾ ಮಾರ್ಕೇಸ್) ಮನೆ' ಅಂತ ಹೇಳಿ, 'ಈ ಪ್ರಾಂತದಲ್ಲಿ ನಮ್ಮೆಲ್ಲರಲ್ಲೂ ಅತ್ಯುತ್ತಮ ಕಥೆಗಳಿವೆ. ಗ್ಯಾಬೊ ಒಳ್ಳೆಯ ಬೆರಳಚ್ಚುಗಾರ ಅಷ್ಟೇ' ಅಂದ". ಒಬ್ಬ ಮಹಾನ್ ಲೇಖಕನನ್ನು ಇದಕ್ಕಿಂತ ಸರಳವಾಗಿ ಮಾನವೀಕರಿಸಲು ಸಾಧ್ಯವೇ?

ಸಲ್ಮಾನ್ ರಶ್ದಿ ಕಷ್ಟದ ಮಾನವ ಜೀವನವನ್ನು ಜೀವಿಸಿದ್ದಾರೆ. ಆತ ಧೈರ್ಯ-ಸ್ಥೈರ್ಯ ತುಂಬಿದವರು ಎಂದು ಹೇಳುವುದಕ್ಕೆ ಬರುವುದಿಲ್ಲ. ನಾವೆಲ್ಲರೂ ಒಂದು ಹಂತದಲ್ಲಿ ಧೈರ್ಯ ಮತ್ತು ಭಯವನ್ನು ಸಮಾನವಾಗಿ ಜೀವಿಸುತ್ತಿರುವವರು. ಆದರೆ ಧೈರ್ಯ ಎನ್ನುವುದರ ಪರಿಭಾಷೆ ತುಸು ಬದಲಾಯಿಸಬೇಕಾಗುತ್ತದೆ. ಧೈರ್ಯಕ್ಕಿಂತ ಮುಖ್ಯವಾದದ್ದು ನಿಲುವು. ಬೆದರಿಕೆ ಹಲ್ಲೆಗಳನ್ನು ಮೀರಿ ಸಲ್ಮಾನ್ ತಮ್ಮ ನಿಲುವುಗಳಿಗೆ ಬದ್ಧರಾಗಿದ್ದಾರೆ. ಅದರ ಜೊತೆಗೆ ಇತರರ ಬರವಣಿಗೆಯನ್ನು ಸಂಭ್ರಮಿಸುತ್ತಾ, ಇತರರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾ, ಇತರರ ಕೃತಿಗಳಿಂದ ಕಲಿಯಬೇಕಾದ್ದನ್ನು ಕಲಿಯುತ್ತಾ ತಮ್ಮ ಕೌತುಕವನ್ನು ಉಳಿಸಿ ಮುಂದುವರೆದಿದ್ದಾರೆ. ಖೊಮೇನಿಯ ಮೃತ್ಯುದಂಡ, ಭೀಕರ ಹಲ್ಲೆ, ಮತ್ತು ಕಳೆದುಕೊಂಡ ಒಂದು ಕಣ್ಣಿನ ಹಿನ್ನೆಲೆಯಲ್ಲಿ ತಮ್ಮ ಓದು, ಹಾಸ್ಯಪ್ರಜ್ಞೆ ಮತ್ತು ಸೃಜನಶೀಲತೆಯನ್ನು ಮುಂದುವರೆಸಿಕೊಂಡಿರುವ ಆತ ನಮ್ಮ ನಿರೀಕ್ಷೆಯನ್ನು ಹುಸಿಪಡಿಸದೇ ಹೆಚ್ಚಿನ ಸಾಹಿತ್ಯವನ್ನು ಕೊಡುತ್ತಾರೆ ಎನ್ನುವುದರಲ್ಲಿ ಅತಿಶಯೋಕ್ತಿಯಿಲ್ಲ.

ಅವರ ಬರವಣಿಗೆಯ ಹಿನ್ನೆಲೆಯಲ್ಲಿ ಪಾಶ್ಚಾತ್ಯ ಸಾಹಿತ್ಯ ಮತ್ತು ಭಾರತೀಯ ಪರಂಪರೆ ಎರಡೂ ಎಷ್ಟು ಪ್ರೇರಕವಾಗಿದೆಯೋ, ಅಷ್ಟೇ ಗಹನವಾಗಿದೆ. ಅವರ ಬರವಣಿಗೆಯ ಮೇಲೆ ಅರೇಬಿಯನ್ ನೈಟ್ಸ್ ಬೀರಿದಷ್ಟೇ ಪ್ರಭಾವವನ್ನು ಕಥಾಸರಿತ್ಸಾಗರ, ಮಹಾಭಾರತ, ರಾಮಾಯಣ ಮತ್ತು ಪಂಚತಂತ್ರಗಳೂ ಬೀರಿವೆ ಎನ್ನುವುದು ಅವರ ಈ ಬರಹದಿಂದ ನಮಗೆ ತಿಳಿಯುತ್ತದೆ. ಪಾಶ್ಚಾತ್ಯ ಭ್ರಾಮಕ ಸಾಹಿತ್ಯವನ್ನು ತುಲನಾತ್ಮಕವಾಗಿ ನಮ್ಮ ಪರಂಪರಾಗತ ಸಾಹಿತ್ಯದೊಂದಿಗೆ ಹೋಲಿಸುವುದಲ್ಲದೇ ತಮ್ಮ ಪ್ರೇರಣೆಯ ಮೂಲ ಸೂತ್ರಗಳನ್ನು ರಶ್ದಿ ಬಿಡಿಸಿಡುತ್ತಾರೆ. ಪ್ರತಿ ಕಾದಂಬರಿಯೂ ಒಂದು ಭಿನ್ನ ಸನ್ನಿವೇಶ ಮತ್ತು ನೆಲೆಯಲ್ಲಿ ರೂಪುಗೊಳ್ಳುತ್ತದೆ. ಅವರ ಇತ್ತೀಚಿನ ಕಾದಂಬರಿ 'ದ ವಿಕ್ಟರಿ ಸಿಟಿ' ವಿಜಯನಗರದ ಸಾಮ್ರಾಜ್ಯದ ಹಿನ್ನೆಲೆಯಲ್ಲಿ ಬರೆದಿರುವ ಮಹಾಗಾಥೆ. ಅವರ ಕಥೆ ಕಾದಂಬರಿಗಳು ಎಷ್ಟು ಪ್ರಭಾವಶಾಲಿಯಾಗಿದೆಯೋ, ಅವರ ಪ್ರಬಂಧಗಳೂ ಅಷ್ಟೇ ಮಹತ್ವದ್ದಾಗಿವೆ. ಒಂದು ಸೃಜನಶೀಲ ಮನಸ್ಸು ಏನೆಲ್ಲಾ ಆತಂಕ, ಭಯ ಮತ್ತು ಬೆದರಿಕೆಯ ನಡುವೆಯೂ ಜಾಗೃತವಾಗಿದೆ ಎನ್ನುವುದಕ್ಕೆ ಅವರ ಈ ಪ್ರಬಂಧ ಸಂಕಲನ ಒಂದು ಉದಾಹರಣೆಯಾಗಿದೆ.

ಮೊದಲಿಗೆ ಅವರ ಸಾಹಿತ್ಯದ ಬಗ್ಗೆ ಅಷ್ಟೇನೂ ಆಸಕ್ತಿ ತೋರದ ನನ್ನನ್ನು ತಮ್ಮತ್ತ ಸೆಳೆಯುವಲ್ಲಿ ಸಫಲರಾಗಿದ್ದಾರೆನ್ನುವುದೂ ರಶ್ದಿಯ ಬರವಣಿಗೆಯ ಮಹತ್ವಗಳಲ್ಲಿ ಒಂದು ಇರಬಹುದು. ಈ ವಿಷಯದಲ್ಲಿ ನಾನು ಒಂಟಿ ಅಲ್ಲ ಅನ್ನುವುದಕ್ಕೆ ಪುರಾವೆಯಾಗಿ ರಶ್ದಿಯವರೇ ಟಾಲ್‌ಸ್ಟಾಯ್ ಬಗೆಗಿದ್ದ ಅನುಮಾನಗಳು ವರ್ಷಗಳ ನಂತರದ ಮರು ಓದಿನೊಂದಿಗೆ ಬದಲಾಗಿದ್ದನ್ನು ಹೇಳಿತ್ತಾರೆ. ನಾವೆಲ್ಲರೂ, ಬೇರೆ ಬೇರೆ ಭಿನ್ನ ಓದುಗಳಿಂದ ಸಮೃದ್ಧರಾಗುತ್ತಾ ಹೋಗುತ್ತೇವೆ. ಒಮ್ಮೊಮ್ಮೆ ಆ ಸಮೃದ್ಧಿ ಅದೇ ಪಠ್ಯದ ಮರು ಓದಿನಿಂದಲೂ ಸಿಗಬಹುದು. ●